

ಭೂಮಿ ಅವನ ಹಾಗೆಯೇ ಬತ್ತಿ ಒಣಗಿ ಹೋಗಿ ಎಷ್ಟೋ ವರ್ಷಗಳಾದುವು! ಮಳೆ ಬರಬಹುದೇ? ಬಂದರೇನು? ಆತ ಆ ಬೆಂಚಿನ ಸಮೀಪ ಹೋಗಿ ಕೊರಳುದ್ದ ಮಾಡಿ ನೋಡಿದ. ಇಲ್ಲ!... ಎಲ್ಲಿಗೆ ಹೋಗಿರಬಹುದು? ಮನೆಯ ಒಳಗಿರಬಹುದೋ?

ಅವನನ್ನು ಕಂಡಾಕ್ಷಣ ಅವಳ ಮುಖ ಅರಳಿತು. ಅವಳು ಇನ್ನೇನು ಹತ್ತಿರಕ್ಕೆ ಬಂದೇಬಿಟ್ಟಳೆಂದು ಹೆದರಿ ಆತ ಕಣ್ಣು ಮಿಟುಕಿಸಿ ಸೂಚಿಸಿದ. ಹಗಲಲ್ಲವೇ? ಯಾರಾದರೂ ನೋಡಿದರೆ ಕೆಡುಕಲ್ಲವೆ? ಆತ ಹಾಗೆಯೇ ಕುಳಿತ.

ಕತ್ತಲಾದಾಗ ಅವಳು ಬಂದಳು.

'ಇತ್ತೀಚೆಗೆ ಕಾಣಿಸುವುದಿಲ್ಲ?' ಅವಳು ಮುನಿಸಿನಿಂದ ಕೇಳಿದಳು.

ಅವನೆಂದ:

'ಇಲ್ಲ.'

ಅವಳು ಹೇಳಿದಳು:

'ನಾನು ಆಸ್ಪತ್ರೆಗೆ ಹೋಗುವ ದಾರಿಯಲ್ಲಿ ನಿಮ್ಮ ಮನೆಯನ್ನು ಕಂಡು ಹಿಡಿದೆ. ಅಲ್ಲಿರುವವರೆಲ್ಲ ಯಾರು?'

'ನನ್ನ ಗೆಳೆಯರು.'

ಅವಳು ವಿಚಿತ್ರವಾಗಿ ನಕ್ಕಳು.

ಅವನು ಕೇಳಿದ: